**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ ಎಂ. ಎಫ್. ಸಿ, ಮುಧೋಳ**

| | |
|---|---|
| ಸಿ.ಸಿ.ನಂ. | 426/2022 |
| ಸಿ.ಡಬ್ಲ್ಯೂ | 1 |
| ಪಿ.ಡಬ್ಲ್ಯೂ | 1 |

| | | |
|---|---|---|
| ಹೆಸರು | | ಕೃಷ್ಣಪ್ಪ ಮಾಂಗ |
| ಗಂಡನ/ತಂದೆ ಹೆಸರು | :- | ಬರಮಪ್ಪ |
| ವಯಸ್ಸು | :- | 58 ವರ್ಷ |
| ಉದ್ಯೋಗ | :- | ಪಿ.ಎಸ್.ಐ ಅಪರಾಧ ವಿಭಾಗ, ಮುಧೋಳ ಠಾಣೆ |
| ವಾಸಸ್ಥಳ | :- | ಮುಧೋಳ |

ಸಾಕ್ಷಿಯನ್ನು ದಿಃ 21.12.2023 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ ರವರಿಂದ**

1. ನಾನು ಕಳೆದ 3 ವರ್ಷಗಳಿಂದ ಮುಧೋಳ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿಃ05.06.2022 ರಂದು ನಾನು ಗಸ್ತು ಕರ್ತವ್ಯದಲ್ಲಿ ಇದ್ದಾಗ ಸಂಜೆ 4-30 ಗಂಟೆಗೆ ಒಂದು ಬಾತ್ಮಿ ಬಂದಿದ್ದು, ಬಾತ್ಮಿ ಪ್ರಕಾರ ಗೂಡ್ಸ ವಾಹನದಲ್ಲಿ ದನಗಳನ್ನು ಸಾಗಾಣಿಕೆ ಮಾಡುತ್ತಿದ್ದಾರೆ ಎಂದು ತಿಳಿದುಬಂದಿದ್ದು, ಅದನ್ನು ನಾನು ಮೇಲಾಧಿಕಾರಿಯವರಿಗೆ ತಿಳಿಸಿ, ನಮ್ಮ ಸಿಬ್ಬಂದಿಗಳಾದ ಚಾಸಾ-6 ರಿಂದ 8 ರವರಿಗೆ ಮಾಹಿತಿ ತಿಳಿಸಿ, ಚಾಸಾ-7 ರವರಿಗೆ ಬಸವೇಶ್ವರ ಸರ್ಕಲ ಬಳಿ ಇಬ್ಬರು ಪಂಚರನ್ನು ಬರಮಾಡಿಕೊಳ್ಳಲು ಸೂಚಿಸಿದ್ದು, ಅಲ್ಲಿಗೆ ಬಂದಿದ್ದು, ಸಿಬ್ಬಂದಿ ಜನ ಮತ್ತು ಪಂಚರು ಸೇರಿಕೊಂಡು 05 - 05 ಸಮಯಕ್ಕೆ ಸಂಗೋಳ್ಳಿ ರಾಯಣ್ಣ ಸರ್ಕಲಗೆ ಹೋದೆವು. ಅಲ್ಲಿ ನಾವು ವಾಚ್ ಮಾಡುತ್ತಿದ್ದಾಗ ಒಂದು ಗೂಡ್ಸ ವಾಹನ ಬಂದಿದ್ದು, ಬಾತ್ಮಿ ಪ್ರಕಾರ ತಪಾಸಣೆ ಮಾಡಲು ಚಾಲಕನ ಹೆಸರನ್ನು ವಿಚಾರಿಸಲಾಗಿ ಆತ ತನ್ನ ಹೆಸರು, ರಮೇಶ ದುರ್ಗಪ್ಪ ಬೋದನ್ನವರ ಎಂದು ಹೇಳಿದನು ಹಾಗೂ ಆತನೊಂದಿಗೆ ಇಬ್ಬರು ಹೆಸರು ಕೇಳಲಾಗಿ ಅವರು ತಮ್ಮ ಹೆಸರು ಲಕ್ಷಣ ಯಲಪ್ಪ ಮೇತ್ರಿ ಮತ್ತು ತಿಪ್ಪಣ್ಣ ಲಾತೂರ ಎಂದು ತಿಳಿಸಿದರು. ಅವರನ್ನು ಕೆಳಗೆ ಇಳಿಸಿ ಗೂಡ್ಸ ವಾಹನ ಸಂಖ್ಯೆ ಕೆ.ಎ-48/ಎ-0571 ನ್ನು ತಪಾಸಣೆ ಮಾಡಲಾಗಿ ಹಿಂದುಗಡೆ ಪ್ಲಾಸ್ಟಿಕ ತಟ್ಟು ಕಟ್ಟಿ ಪ್ಯಾಕ್ ಮಾಡಲಾಗಿತ್ತು. ವಾಹನದ ಚಾಲಕನಿಗೆ ಅದನ್ನು ಬಿಚ್ಚಿಸಿ ತೋರಿಸಲು ಹೇಳಿದಾಗ ಆತ, ಸದರಿ ಪ್ಲಾಸ್ಟಿಕ ತಟ್ಟನ್ನು ಬಿಚ್ಚಿದಾಗ ಒಳಗಡೆ 3 ದನಗಳು ಇದ್ದವು. ಅವುಗಳಲ್ಲಿ 2 ಎತ್ತು ಮತ್ತು 1 ಆಕಳು ಇತ್ತು. ಸದರಿ ದನಗಳನ್ನು ವಾಹನೊದಳಗಡೆ ಕೊಂಬುಗಳು ಮೇಲ್ಗಡೆ ತಾಗುವಂತೆ ನಿಲ್ಲಿಸಿದರು. ತದನಂತರ ರೇಡ ಪಂಚನಾಮೆ ಮಾಡಿದೆನು. ಪಂಚನಾಮೆಯನ್ನು ಸಂಜೆ 5-20 ಗಂಟೆಯಿಂದ 6-20 ಗಂಟೆಯವರೆಗೆ ಸ್ಥಳದಲ್ಲಿಯೇ ಬರೆದು

ಸ್ಥಳದಲ್ಲಿ ಪಂಚರ ಸಹಿಯನ್ನು ಪಡೆದೆನು. ಸದರಿ ಆ ಪಂಚನಾಮೆ ಸಮಯದಲ್ಲಿ ಛಾಯಾಚಿತ್ರ ತೆಗೆದೆನು. ನಂತರ ಸದರಿ ಗೂಡ್ಸ ವಾಹನವನ್ನು ಮತ್ತು ದನಗಳನ್ನು ತೆಗೆದುಕೊಂಡು ಹಾಗೂ ಆರೋಪಿತರನ್ನು ದಸ್ತಗಿರಿ ಮಾಡಿ ಕರೆದುಕೊಂಡು ಠಾಣೆಗೆ ಬಂದಿರುತ್ತೇವೆ. ತದನಂತರ ನಾನು ಚಾಸಾ-13 ರವರಿಗೆ ಫಿರ್ಯಾದಿಯನ್ನು ಕೊಟ್ಟಿರುತ್ತೇನೆ. ನಾನು ಪ್ರಕರಣದ ವಿಚಾರಣೆ ಸಮಯದಲ್ಲಿ ಮರುಹೇಳಿಕೆ ಕೊಟ್ಟಿದ್ದೇನೆ. ಮರುಹೇಳಿಕೆಯಲ್ಲಿ ಚಾಸಾ-9 ರವರನ್ನು ದಾಳಿಯ ಸಮಯದಲ್ಲಿ ಕರೆದುಕೊಂಡು ಹೋಗಿದ್ದು, ಸದರಿ ದೂರಿನ ಸಮಯದಲ್ಲಿ ನಮೂದಿಸಿರುವುದಿಲ್ಲ ಎಂದು ಹೇಳಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸಿಸುತ್ತೇನೆ. ಆರೋಪಿತರು ಈ ದಿನ ಗೈರು ಹಾಜರ ಇದ್ದು, ಅವರನ್ನು ಗುರುತಿಸಲು ಯಾವುದೇ ಆಕ್ಷೇಪಣೆ ಇಲ್ಲ ಎಂಬ ಷರತ್ತಿಗೆ ಒಳಪಟ್ಟು ಕಲಂ.317 ರ ಅರ್ಜಿಯನ್ನು ಅಂಗೀಕರಿಸಲಾಯಿತು. ಸದರಿ ವಶಪಡಿಸಿಕೊಂಡ ಗೂಡ್ಸ ವಾಹನ ನೋಡಿದರೆ ಗುರುತಿಸುತ್ತೇನೆ.

2. ಸಾಕ್ಷಿಗೆ ಈಗ ಸ್ಥಳ ಪಂಚನಾಮೆ ತೋರಿಸುತ್ತಿದ್ದು ಅದರ ಮೇಲೆ ಇರುವ ತಮ್ಮ ಸಹಿಯನ್ನು ಗುರುತಿಸಿದ್ದು ಪಂಚನಾಮೆಯನ್ನು ನಿಪಿ-1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಈಗ 2 ಛಾಯಚಿತ್ರಗಳನ್ನು ನೋಡುತ್ತಿದ್ದು, ಅವುಗಳಲ್ಲಿ ತಾನು ಇದ್ದೇನೆ ಎಂದು ಹಾಗೂ ಆ ದಿನ ವಶಪಡಿಸಿಕೊಂಡ ಗೂಡ್ಸ ವಾಹನ, ಆರೋಪಿತರು ಹಾಗೂ ದನಗಳು ಇವೆ ಎಂದು ಗುರುತಿಸುತ್ತಾರೆ. (ಸದರಿ ಛಾಯಾಚಿತ್ರಳೊಂದಿಗೆ ಕಲಂ.65(ಬಿ) ಅಡಿ ಸರ್ಟಿಫಿಕೇಟ ಲಗತ್ತಿಸಿಲ್ಲದ ಕಾರಣ ಸದರಿ ಛಾಯಾಚಿತ್ರಗಳನ್ನು ನಿಶಾನೆ ಎಂದು ಗುರುತಿಸಲು ಆಗುವುದಿಲ್ಲ). ಸಾಕ್ಷಿಗೆ ಈಗ ಫಿರ್ಯಾದಿಯನ್ನು ತೋರಿಸುತ್ತಿದ್ದು, ಅದರ ಮೇಲೆ ಇರುವ ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಸದರಿ ಫಿರ್ಯಾದಿಯನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಪ್ರ.ವ.ವ ತೋರಿಸುತ್ತಿದ್ದು, ಅದರ ಮೇಲೆ ಇರುವ ತಮ್ಮ ಸಹಿಯನ್ನು ಗುರುತಿಸಿದ್ದರಿಂದ ಸದರಿ ಪ್ರ.ವ.ವ ನಿಪಿ-3 ಎಂದು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ .

Sd/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ಮುಧೋಳ